1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 14.01.2026 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 31 ಪಿ. ಡಬ್ಲ್ಯೂ:24

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ್ ವಿ.ಸಿ. |
| ತಂದೆಯ ಹೆಸರು | ಚಿಕ್ಕಮಂಟಯ್ಯ |
| ವಯಸ್ಸು | 41 ವರ್ಷ |
| ಉದ್ಯೋಗ | ಪಿಐ , ಮಹಿಳಾ ಪೊಲೀಸ್ ಠಾಣೆ, ಮೈಸೂರು |
| ವಾಸ | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 11.07.2022 ರಿಂದ ದಿಃ 13.01.2025 ರವರೆಗೆ ನಾನು ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 15.08.2022 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ.23 ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ.
3. ದಿಃ 16.08.2022 ರಂದು ಮಹಜರ್ ಕಾಲದಲ್ಲಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ರಸಾಯನಿಕ ಪರೀಕ್ಷೆಗಾಗಿ ಆರ್ ಎಫ್ ಎಸ್ ಎಲ್ ಮೈಸೂರು ರವರಿಗೆ ನಮ್ಮ ಠಾಣಾ ಸಿಬ್ಬಂದಿ ಫ್ರಾಸಾ.16 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ.
4. ದಿಃ 29.08.2022 ರಂದು ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಿಸಿದ ಡಿಮ್ಯಾಂಡ್ ರಿಜಿಸ್ಟರ್ ನ್ನು ಚೊಟ್ಟನಹಳ್ಳಿ ಪಿಡಿಓ ರವರಿಂದ ಪಡೆದುಕೊಂಡಿರುತ್ತೇನೆಂ. ಸಾಕ್ಷಿಯು ಡಿಮ್ಯಾಂಡ್ ರಿಜಿಸ್ಟರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.39 ಗುರುತಿಸಲಾಗಿರುತ್ತದೆ.
5. ದಿಃ 30.08.2022 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ಫ್ರಾಸಾ. 1 ರವರು ನೀಡಿದ ಮುದ್ರಿತ ಹೆಚ್ಚುವರಿ ದೂರನ್ನು ಸ್ವೀಕರಿಸಿ ಸದರಿ ದೂರಿನ ಆಧಾದರ ಮೆರೇಗೆ ಹಚ್ಚುವರಿ ಕಲಂ 302 ಐಪಿಸಿಯನ್ನು ಅಳವಡಿಸಿಕೊಂಡಿರುತ್ತೇನೆ. ಈ ಬಗ್ಗೆ ನ್ಯಾಯಾಲಯಕ್ಕೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಹೆಚ್ಚುವರಿ ದೂರನ್ನು ನೋಡಿ , ಅದನ್ನು ಈಗಾಗಲೇ ನಿಪಿ.4 ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು

ಗುರುತಿಸಲಾಯಿತು. ಸಾಕ್ಷಿಯು ನಿವೇದನೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.51 ಎಂದು, ಸಾಕ್ಷಿಯ ಸಹಿಯನ್ನು ನಿಪಿ.51(ಎ) ಎಂದು ಗುರುತಿಸಲಾಯಿತು.

6. ನಂತರ ಕೃತ್ಯ ನಡೆದ ಸ್ಥಳವಾದ ನೆಟ್ಟಕಲ್ಲು ಗ್ರಾಮದಲ್ಲಿ ಇರುವ ಆರೋಪಿ ಸಿದ್ದೇಗೌಡರವರ ಮನೆಗೆ ಭೇಟಿ ನೀಡಿರುತ್ತೇನೆ. ಅಲ್ಲಿ ಪಂಚರಾದ ಮನು ಕುಮಾರ್ ಮತ್ತು ಸ್ವಾಮಿ ರವರಿಗೆ ಲಿಖಿತ ನೋಟಿಸು ನೀಡಿ ಬರಮಾಡಿಕೊಂಡಿರುತ್ತೇನೆ. ಸ್ಥಳದಲ್ಲಿ ಮೃತ ಮಹದೇವಮ್ಮ ರವರ ಶವ ಇತ್ತು, ಸದರಿ ಸ್ಥಳದಲ್ಲಿ ಪ್ರಾಸಾ. 1 ರವರು ಸ್ಥಳ ತೋರಿಸಿದ ನಂತರ ಸದರಿ ಮಹದೇವಮ್ಮ ರವರ ಶವವನ್ನು ಮಳವಳ್ಳಿಯ ಸರ್ಕಾರಿ ಆಸ್ಪತ್ರೆಗೆ ಮಹಿಳಾ ಸಿಬ್ಬಂದಿ ಚಾಸಾ. 22 ಮತ್ತು 23 ರವರ ಮುಖೇನ ಕೋರಿಕೆ ಪತ್ರದೊಂದಿಗೆ ಕಳುಹಿಸಿರುತ್ತೇನೆ. ಸದರಿ ಸ್ಥಳದಲ್ಲಿ ಮಹಜರನ್ನು ರಾತ್ರಿ 8.15 ರಿಂದ 9.00 ಗಂಟೆ ತನಕ ಪಂಚರ ಸಮಕ್ಷಮದಲ್ಲಿ ಮಾಡಿಕೊಂಡಿರುತ್ತೇನೆ. ಸದರಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.25 ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.25(ಬಿ) ಎಂದು ಗುರುತಿಸಲಾಯಿತು.

7. ಸದರಿ ಮಹಜರ್ ಕಾಲದಲ್ಲಿ ಎರಡು ಫೋಟೋಗಳನ್ನು ತೆಗೆದುಕೊಂಡಿದ್ದೆನು. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು ಅದನ್ನು ಈಗಾಗಲೇ ನಿಪಿ. 17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.26 ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 26(ಬಿ ) ಎಂದು ಗುರುತಿಸಲಾಯಿತು.

8. ಈ ಪ್ರಕರಣವು ಘೋರ ಪ್ರಕರಣವಾದ್ದರಿಂದ ಈ ಪ್ರಕಣವನ್ನು ಮುಂದಿನ ತನಿಖೆಗಾಗಿ ಚಾಸಾ. 32 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

9. ಮಳವಳ್ಳಿ ಸರ್ಕಾರಿ ಆಸ್ಪತ್ರೆಯ ವೈದ್ಯರಿಗೆ ನೀಡಿದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.52 ಎಂದು, ಸಾಕ್ಷಿಯ ಸಹಿಯನ್ನು ನಿಪಿ.52(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚೊಟ್ಟನಹಳ್ಳಿ ಗ್ರಾಮ ಪಂಚಾಯಿತಿಯ ಪಿಡಿಓ ರವರ ಕವರಿಂಗ್ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.53 ಎಂದು, ಸಾಕ್ಷಿಯ ಸಹಿಯನ್ನು ನಿಪಿ.53(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ**

10. ದಿಃ 03.08.2022 ರಂದು ನಾನು ಕರ್ತವ್ಯದಲ್ಲಿ ಇದ್ದೆನು. ದೂರು ನೀಡಿದ ದಿನ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ. ನೆಟ್ಟಕಲ್ಲು ಗ್ರಾಮವು, ನಮ್ಮ ಪೊಲೀಸ್ ಠಾಣೆ ಯಿಂದ ಸುಮಾರು 15 ಕಿಮೀ ದೂರ ಇದೆ. ದಿನಾಂಕ 15.08.2022 ರ ತನಕ ನಾನು ಬೇರೆ ಪ್ರಕರಣದಲ್ಲಿ ತನಿಖೆಯಲ್ಲಿ ಇದ್ದುದರಿಂದ ಈ ಪ್ರಕರಣದ ಕಡತವನ್ನು ಸದರಿ ಸಮಯದಲ್ಲಿ ನಾನು ನೋಡಿಲ್ಲ. ದಿಃ 04.08.2022 ರಂದು ನನ್ನ ಹಿಂದಿನ ತನಿಖಾಧಿಕಾರಿಯವರು ಸದರಿ ಎಫ್ ಎಸ್ ಎಲ್ ಗೆ ನಾನು ಕಳುಹಿಸಿದ್ದ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿದ್ದರು.

11. ಹೆಚ್ಚುವರಿ ದೂರು ನೀಡುವ ಸಮಯದಲ್ಲಿ ಫ್ರಾಸಾ.1 ರವರ ಜೊತೆ ಬೇರೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಫ್ರಾಸಾ.1 ರವರು ಬರವಣಿಗೆ ಮಾಡಿದ ದೂರು ತಂದಿರಲಿಲ್ಲ ಎಂದರೆ ಸಾಕ್ಷಿಯು, ಅವರು ಮುದ್ರಿತ ದೂರನ್ನು ನೀಡಿದ್ದರು ಎಂದು ಹೇಳುತ್ತಾರೆ. ನಿಪಿ.4 ಹೆಚ್ಚುವರಿ ದೂರನ್ನು ನಮ್ಮ ಪೊಲೀಸ್ ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ.

12. ಆರೋಪಿಯ ಮನೆಗೆ ನಾನು ಮಹಜರಿಗೆ ಹೋಗಿದ್ದಾಗ ಫ್ರಾಸಾ.1 ರವರು ಮನೆಯಲ್ಲಿ ಇದ್ದರು. ಮಹಜರಿಗೆ ಹೋದಾಗ ಅಕ್ಕ ಪಕ್ಕದ ಮನೆಯವರನ್ನು ಘಟನೆಯ ಬಗ್ಗೆ ವಿಚಾರಣೆ ಮಾಡಿಲ್ಲ. ನಾನು ಈ ಪ್ರಕರಣದಲ್ಲಿ ಘಟನೆ ಹೇಗಾಯಿತು ಎಂದು ತನಿಖೆ ಮಾಡದೇ, ಸತ್ಯ ಸಂಗತಿಗಳನ್ನು ಮರೆ ಮಾಚಿ ನಮ್ಮ ಪೊಲೀಸ್ ಠಾಣೆಯ ಅಂಕಿ ಅಂಶಗಳಿಗೋಸ್ಕರ ವಿಚಾರಣೆ ಮಾಡದೇ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.